

ಸುತ್ತಲೂ ಹಸುರು ಹಾಸಿಕೊಂಡ ಬೆಟ್ಟಗಳಿಂದ ಆವೃತವಾಗಿರುವ ಬಲ್ಲಾಳರಾಯನ ದುರ್ಗ, ಪ್ರಕೃತಿ ಆರಾಧಕರ ಮೆಚ್ಚಿನ ತಾಣ.

■ ಪ್ರಗತಿ ಡಿ.ಡಿ.

# ಬೆಟ್ಟಗಳ ಸೆರಗಲ್ಲಿ ಬಲ್ಲಾಳರಾಯನ ದುರ್ಗ

ಕಾಫಿ ತೋಟ, ಹಸುರು ತುಂಬಿದ ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಚಿಕ್ಕಮಗಳೂರಿನಲ್ಲಿ ಪ್ರವಾಸಿಗರನ್ನು ಮೋಡಿಮಾಡುವ ಹಲವು ಭವ್ಯತಾಣಗಳಿವೆ. ಅವುಗಳಲ್ಲಿ ಬಲ್ಲಾಳರಾಯನ ದುರ್ಗವೂ ಒಂದು. ಅದು ತನ್ನ ಸೌಂದರ್ಯದಿಂದ ಪ್ರಕೃತಿಪ್ರಿಯರ ಕಣ್ಮನ ಸೆಳೆಯುತ್ತಿದೆ.

ದೈಹಿಕ ಕಸರತ್ತು, ಚಾಣಾಕ್ಷತನ ಬೇಡುವ ಚಾರಣದ ತಾಣಗಳಲ್ಲಿ ಬಲ್ಲಾಳರಾಯನ ದುರ್ಗವೂ ಒಂದೆನ್ನಬಹುದು. ಸುತ್ತ ಕಾನನ, ಒಂದಷ್ಟು ಹುಲ್ಲುಗಾವಲು, ಎತ್ತ ನೋಡಿದರತ್ತ ಬೆಟ್ಟಗಳು, ಬೆಟ್ಟದ ಮೇಲಿಂದ ಪ್ರಪಾತದೆಡೆಗೆ ಧುಮುಕುವ ಜಲಪಾತಗಳಿಂದ ತನ್ನ ಸೌಂದರ್ಯವನ್ನು ಉದ್ದೀಪನಗೊಳಿಸಿಕೊಂಡಿದೆ.

ಮೂಡಿಗೆರೆ ತಾಲೂಕಿನ ಸುಂಕಸಾಲೆ ಗ್ರಾಮದಲ್ಲಿದೆ ಈ ಬಲ್ಲಾಳರಾಯನ ದುರ್ಗ. ಇಲ್ಲಿ ಹೊಯ್ಸಳರ ರಾಜ ಬಲ್ಲಾಳರಾಯ ಎಂಬ ದೊರೆ ಕೋಟೆ ನಿರ್ಮಿಸಿರುವುದರಿಂದ ಆತನ ಹೆಸರಿನೊಂದಿಗೆ ಬಲ್ಲಾಳರಾಯನ ದುರ್ಗ ಎಂದು ಕರೆಯಲಾಗಿದೆ.

ದ್ರಾವಿಡ ಶೈಲಿಯ ವಾಸ್ತುಶಿಲ್ಪದಲ್ಲಿ ಕೋಟೆಯನ್ನು ನಿರ್ಮಿಸಿದ್ದು, ಇದು 1509 ಮೀಟರ್ ಎತ್ತರದಲ್ಲಿದೆ. ದುರ್ಗಮ ಕಾನನದಲ್ಲಿ ಶತ್ರು ಸೈನ್ಯವನ್ನು ಎದುರಿಸುವುದು ಕಷ್ಟಸಾಧ್ಯವಾದ್ದರಿಂದ ಆಕ್ರಮಣಗಾರರು ಬರುವುದನ್ನು ಮುಂಚಿತವಾಗಿಯೇ ತಿಳಿಯಲು ಬೆಟ್ಟದ ಮೇಲೊಂದು ಕೋಟೆ ನಿರ್ಮಿಸಲಾಗಿದೆ.

ಮೂಡಿಗೆರೆಯಿಂದ ಕೊಟ್ಟಿಗೆಹಾರ ಮಾರ್ಗವಾಗಿ ಹೋಗುವ ದಾರಿಯಲ್ಲಿ ಬೆಟ್ಟದ ಕೆಳಗೆ ಪುರಾತನ ಕಾಲಭೈರವ ದೇವಾಲಯವಿದೆ. ಈ ದೇವಾಲಯಕ್ಕೆ ವೀರಬಲ್ಲಾಳನ ಪತ್ನಿ ಪ್ರತಿದಿನ ಭೇಟಿ ನೀಡುತ್ತಿದ್ದಳು ಎಂಬ ಐತಿಹ್ಯವಿದೆ. ಈಗಲೂ ಪ್ರವಾಸಿಗರು ಕೋಟೆಗೆ ಹೋಗುವ ಮುನ್ನ ದೇವರ ದರ್ಶನ ಮಾಡುತ್ತಾರೆ.

ದೇವಾಲಯದಿಂದ ಮುಂದೆ ಸಾಗಿದರೆ ಹಚ್ಚ ಹಸುರಿನ ಬೆಟ್ಟಗಳಿಂದ ಸುತ್ತುವರಿದಿರುವ ರಾಣಿ ಝರಿಯ ವಿಹಂಗಮ ನೋಟ ಕಾಣಬಹುದು. ಟಿಪ್ಪು ಸುಲ್ತಾನನ ಪಡೆಗಳಿಂದ ತಪ್ಪಿಸಿಕೊಳ್ಳಲು ಇಲ್ಲಿಂದ ಜಿಗಿದ ರಾಣಿ ಪದ್ಮಿನಿ ದೇವಿಯ ಹೆಸರನ್ನು ಇದಕ್ಕೆ ಇಡಲಾಗಿದೆ.



ಬಲ್ಲಾಳರಾಯನ ದುರ್ಗಕ್ಕೆ ಹೋಗಲು ಎರಡು ದಾರಿಗಳಿವೆ. ಮೊದಲ ದಾರಿ ಮೂಡಿಗೆರೆ ತಾಲ್ಲೂಕಿನಿಂದ 41 ಕಿ.ಮೀ. ದೂರದಲ್ಲಿರುವ ದುರ್ಗದಹಳ್ಳಿ ಗ್ರಾಮದ ಮೂಲಕವಾದರೆ, ಮತ್ತೊಂದು ಧರ್ಮಸ್ಥಳದಿಂದ 30 ಕಿ.ಮೀ. ಸಾಗಿದರೆ ಬಂಡಾಜೆ ಫಾಲ್ಸ್ ತಲುಪಿ ಅಲ್ಲಿಂದ ಸಾಗಬಹುದು. ಕೋಟೆಯ ಮೇಲ್ಭಾಗದಲ್ಲಿ ಮೂರ್ನಾಲ್ಕು ಕಡೆ ಕಾವಲು ಬುರುಜಿದೆ. ಚಾರ್ಮಾಡಿಯ ಏರಿಕಲ್ಲು ಬೆಟ್ಟ ಈ ಭಾಗದಿಂದ ಮೋಹಕವಾಗಿ ಕಾಣುತ್ತದೆ. ಬೆಟ್ಟದ ಕಲ್ಲುಗಳನ್ನೇ ಕೋಟೆಗೆ ಬಳಸಿ, ಬೃಹತ್ ಕಡೆಯುವ ಕಲ್ಲು, ಬೀಸುವ ಕಲ್ಲು ತಯಾರಿಸಿದ್ದಾರೆ. ಕೋಟೆಯ ಶಿಥಿಲಗೊಂಡ ಗೋಡೆಗಳು ಬಲ್ಲಾಳರಾಯನ ಕಾಲದ ಸಾಕ್ಷ್ಯದಂತೆ ನಿಂತುಕೊಂಡಿವೆ. ಬಂಡಾಜೆ ಜಲಪಾತವು ಸುಮಾರು 200 ಅಡಿಗಳಷ್ಟು ಕೆಳಗೆ ಧುಮುಕುವ ದೃಶ್ಯವನ್ನು ಇಲ್ಲಿಂದ ಕಂಡರೆ ಹೃದಯ ಬಡಿತ ಹೆಚ್ಚುತ್ತದೆ. ಪ್ರವಾಸಿಗರಿಗೆ ತಂಗಲೆಂದೇ ಅನೇಕ ಹೋಂಸ್ಟೇಗಳು ಇವೆ. ಎತ್ತ ನೋಡಿದರತ್ತ ಹಸುರು ಚೆಲ್ಲುವ ಈ ಚೆಲುವನ್ನು ಕಣ್ತುಂಬಿಕೊಳ್ಳುವುದೇ ಒಂದು ವಿಶೇಷ ಅನುಭೂತಿ.

ಪ್ರತಿಕ್ರಿಯಿಸಿ: feedback@sudha.co.in